ಶುಕ್ರವಾರ ಆನೇ ಜನವರಿ ೧೯೯೩, ಪುಷ್ಯ ೧೮, ಶಕ ೧೯೧೪

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೨೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀಮತಿ **ನಾಗಮ್ಮ ಸಿ. ಕೇಶವಮೂರ್ತಿ**) ಅವರು

ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ದಾವಣಗೆರೆ ನಗರ ಸಭೆಯನ್ನು ನಗರಪಾಲಿಕೆಯಾಗಿ ಪರಿವರ್ತನೆ.

1090-ಶ್ರೀ ಎಂ.ವೈ. ವೀರಣ್ಣ (ದಾವಣಗೆರೆ) : ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಪುರಸಭೆಯನ್ನು ನಗರಪಾಲಿಕೆಯನ್ನಾಗಿ ಮಾಡುವ ಯೋಚನೆ ಸರ್ಕಾರಕ್ಕಿದೆಯೇ?

ಆ) ಇದ್ದಲ್ಲಿ ಆ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇದೆ.

ಆ) ಈ ಬಗ್ಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಪೌರಾಡಳಿತ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಲಾಗಿದೆ. ಪ್ರಸ್ತಾವನೆ ಬಂದ ನಂತರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವೈ.ಎಂ.ವೀರಣ್ಣ :ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ದಾವಣಗೆರೆ ಪುರಸಭೆಯನ್ನು ನಗರಪಾಲಿಕೆಯಾಗಿ ಪರಿವರ್ತಿಸುವ ಕ್ರಮ ಇದೆ ಎಂದು ತಿಳಿಸಿದ್ದಾರೆ ಆದರೆ ಅದನ್ನು ಎಷ್ಟು ಅವಧಿಯೊಳಗೆ ಮಾಡಲು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು. ಕಾರಣ ಈಗಾಗಲೇ ಅಲ್ಲಿಯ ಜನಸಂಖ್ಯೆ 2 ಲಕ್ಷಕ್ಕೂ ಹೆಚ್ಚು ಇದೆ. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ 76: ಸೆಕ್ಷನ್ 3 ರ ಪ್ರಕಾರ ನಗರಪಾಲಿಕೆ ಮಾಡುವುದಕ್ಕೆ ಎಲ್ಲಾ ರೀತಿಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಆದು ಬಹು ದಿವಸಗಳ ಬೇಡಿಕೆ, ಆದರ ಬಗ್ಗೆ ಸೂಕ್ತ ನಿರ್ಧಾರ ತಿಳಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಚೌಡರೆಡ್ಡಿ : ಮಾನ್ಯ ಸದಸ್ಯರು ಆ ಸೆಕ್ಷನ್, ಎಲ್ಲಾ ವಿಚಾರಗಳನ್ನು ಆಗಲೇ ಹೇಳಿದ್ದಾರೆ, 2 ಲಕ್ಷ ಪಾಪ್ಯುಲೇಷನ್ ಇದೆ, 1 ಕೋಟಿಗಿಂತ ಹೆಚ್ಚಾಗಿ ವರಮಾನ ಇದೆ, ಅಲ್ಲಿ ನಾವು ಸಿಟಿ ಮುನಿಸಿಪಾಲಿಟಿಯನ್ನು ಕಾರ್ಪೊರೇಷನಾಗಿ

ಕನ್‌ವರ್ಟ್ ಮಾಡಬಹುದು ಎಂದು ಹೇಳಿದ್ದಾರೆ. ಪ್ರಸ್ತಾವನೆಯ ಜೊತೆಗೆ ತುಮಕೂರು, ಬಳ್ಳಾರಿ, ಕೂಡ ಸೇರಿದೆ. ಇದನ್ನು 24-8-92ರಲ್ಲಿ ಡಿ.ಸಿ.ಯವರಿಗೆ ಕಳುಹಿಸಿದ್ದೇವೆ, ಅವರು ಎಲ್ಲಾ ಫಾರ್ಮಾಲಿಟೀಸ್ ಮುಗಿಸಿ ಕಳಿಸಿಕೊಡಲಿ.

ಶ್ರೀ ವೈ.ಎಂ. ವೀರಣ್ಣ : ಪ್ರಸ್ತಾವನೆಯನ್ನು ಕಳಿಸಿಕೊಟ್ಟ ತಕ್ಷಣ ಕ್ರಮ ಕೈಗೊಳ್ಳುತ್ತಾರೇನು?

ಶ್ರೀ ಚೌಡರೆಡ್ಡಿ : ನಗರಸಭೆಯವರದೂ ಕೆಲವು ಫಾರ್ಮಾಲಿಟೀಸ್ ಇದೆ, ಅದನ್ನು ಎಷ್ಟು ಬೇಗ ಕಳಿಸಿದರೆ ನಮ್ಮ ಕಡೆಯಿಂದಂತೂ ನಿಧಾನವಾಗುವುದಿಲ್ಲ.

ಶ್ರೀ ವೈ.ಎಂ. ವೀರಣ್ಣ : ಸರ್ವಾನುಮತದಿಂದ ಠರಾವು ಮಾಡಿ ನಗರಪಾಲಿಕೆ ಮಾಡಬೇಕೆಂದು ತಮಗೆ ವಿನಂತಿಸಿಕೊಂಡಿದ್ದಾರೆ ಅದು ತಮಗೆ ಮುಟ್ಟಿದ ತಕ್ಷಣ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಚೌಡರೆಡ್ಡಿ : ಮುಟ್ಟಿದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಕೊಡಗು ಜಿಲ್ಲೆಯಲ್ಲಿ ತೆರೆದ ಅಂಗನವಾಡಿ ಕೇಂದ್ರಗಳ ಸಂಖ್ಯೆ

655-ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ತೆರೆಯಲಾಗಿರುವ ಅಂಗನವಾಡಿ ಕೇಂದ್ರಗಳೆಷ್ಟು?
(ತಾಲ್ಲೂಕುವಾರು ವಿವರ ಕೊಡುವುದು)

ಆ) ಇದಕ್ಕಾಗಿ ಬಿಡುಗಡೆಯಾಗಿರುವ ಅನುದಾನವೆಷ್ಟು?

ಇ) ಅಂಗನವಾಡಿಗಳಿಗೆ ಸ್ವಂತ ಕಟ್ಟಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಸರ್ಕಾರವು ಸ್ವಂತ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) 559 ಅಂಗನವಾಡಿ ಕೇಂದ್ರಗಳು

1) ಪೊನ್ನಂಪೇಟೆ	257	ಅಂಗನವಾಡಿ ಕೇಂದ್ರಗಳು
2) ಮಡಿಕೇರಿ	202	ಅಂಗನವಾಡಿ ಕೇಂದ್ರಗಳು
3) ಸೋಮವಾರಪೇಟೆ	100	ಅಂಗನವಾಡಿ ಕೇಂದ್ರಗಳು
ಒಟ್ಟು	559	ಅಂಗನವಾಡಿ ಕೇಂದ್ರಗಳು

ಆ) ರೂ. 130.80 ಲಕ್ಷಗಳು

ಇ) ಹೌದು.

ಈ) ಸ್ವಂತ ಕಟ್ಟಡಗಳನ್ನು ಕಟ್ಟಿಸಲು ಈ ಜಿಲ್ಲೆಗೆ 1992Ë93 ನೇ ಸಾಲಿನಲ್ಲಿ ರೂ. 10ಲಕ್ಷವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಲಭ್ಯವಾಗುವ ಸಂಪನ್ಮೂಲಗಳನ್ನು ಅನುಸರಿಸಿ ಕಟ್ಟಡಗಳನ್ನು ಹಂತ ಹಂತವಾಗಿ ಕಟ್ಟಿಸಲು ಸಾಧ್ಯವಾಗುವುದು.

ಶ್ರೀಮತಿ ಸುಮಾ ವಸಂತ್ : ಪೊನ್ನಂಪೇಟೆ ಅಂದರೆ ಅದು ವಿರಾಜಪೇಟೆ ಕ್ಷೇತ್ರಕ್ಕೆ ಬರುತ್ತದೆ. 257 ಅಂಗನವಾಡಿ ಕೇಂದ್ರಗಳಿವೆ ಎಂದಿದ್ದಾರೆ. ಇವುಗಳಲ್ಲಿ